ಶ್ರೀ ಹೆಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ವಿಶ್ವಬ್ಯಾಂಕ್ ಸಾಲದ ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆಯು 31-3-1995 ಕ್ಕೆ ಅಂತ್ಯಗೊಂಡಿರುತ್ತದೆ. ಆದ್ದರಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ 1999-2001 ನೇ ವರ್ಷಗಳಲ್ಲಿ ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆಯಡಿಯಲ್ಲಿ ಯಾವುದೇ ಕಾಮಗಾರಿಗಳನ್ನು ತೆಗೆದುಕೊಂಡಿರುವುದಿಲ್ಲ.

ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೊಂಗನೂರು ಹಿರಿಕೆರೆ ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾಶಯಗಳ ಅಭಿವೃದ್ಧಿ

1225 (1594) ಶ್ರೀ ಎ.ಆರ್.ಕೃಷ್ಣಮೂರ್ತಿ (ಸಂತೇಮಾರನ ಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಹೊಂಗನೂರು ಹಿರೇಕೆರೆ, ಏತ ನೀರಾವರಿ ಯೋಜನೆಗೆ ಮಂಜೂರಾಗಿರುವ ಹಣವೆಷ್ಟು; ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮಂಜೂರಾಗಿದ್ದ ಹಣವೆಷ್ಟು; ಈ ಯೋಜನೆಯ ಅನುಷ್ಠಾನಕ್ಕೆ ಕಾಮಗಾರಿಗಾಗಿ ಎಷ್ಟು ಬಾರಿ ಟೆಂಡರ್ ಕರೆಯಲಾಗಿದೆ; ಕರೆದಿದ್ದ ಟೆಂಡರ್ ಏನಾದರೂ ರದ್ದಾಗಿದೆಯೇ ಆಗಿದ್ದಲ್ಲಿ ಕಾರಣ ತಿಳಿಸುವುದು; ಟೆಂಡರ್ ರದ್ದಾದ ನಂತರ ಕೈಗೊಂಡ ಮುಂದಿನ ಕ್ರಮವೇನು; ಹಾಲಿ ಈ ಯೋಜನೆ ಯಾವ ಹಂತದಲ್ಲಿದೆ (ವಿವರ ನೀಡುವುದು)?

ಶ್ರೀ ಎಚ್.ಕೆ.ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಈ ಯೋಜನೆಗೆ 2000-01 ನೇ ಸಾಲಿನಲ್ಲಿ ರೂ. 15.00 ಲಕ್ಷಗಳ ಅನುದಾನ ಹಂಚಿಕೆಯಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ 2 ನೇ ಬಾರಿ ಗುತ್ತಿಗೆದಾರರ ಪೂರ್ವಭಾವಿ ಅರ್ಹತಾ ಟೆಂಡರ್ ಕರೆಯಲಾಗಿದೆ; ಮೊದಲನೇ ಬಾರಿ ಕಳೆದ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ-2000ದಂತೆ ರದ್ದುಪಡಿಸಿ ಪನಃ ಟೆಂಡರ್ ಕರೆಯಲಾಗಿದೆ.

ಹೆಚ್ಚವರಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅಳವಡಿಸುವುದು

1226 (1595) ಶ್ರೀ ಎ.ಆರ್. ಕೃಷ್ಣಮೂರ್ತಿ ಸಂತೇಮಾರನಹಳ್ಳಿ : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂತೇಮಾರನಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ದೇವನೂರು ಸಂತೇಮಾರಳ್ಳಿ ಹಾಗೂ ಚಂದಕವಾಡಿ ವಿದ್ಯುತ್ ಉಪಕೇಂದ್ರಗಳ ಸಾಮರ್ಥ್ಯ ಎಷ್ಟು;

ಆ) ಈ ವಿದ್ಯುತ್ ಉಪ ಕೇಂದ್ರಗಳಿಗೆ ಹಾಲಿ ಬೇಡಿಕೆ ಇರುವ ವಿದ್ಯುತ್ ಪ್ರಮಾಣ ಎಷ್ಟು;

ಇ) ಈ ಉಪಕೇಂದ್ರಗಳಿಂದ ಸಮರ್ಪಕವಾಗಿ ಬೇಡಿಕೆಗನುಗುಣವಾಗಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆಯೇ;

ಈ) ಇಲ್ಲದಿದ್ದಲ್ಲಿ, ಆ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು;

ಉ) ಹೆಚ್ಚುವರಿ ಬೇಡಿಕೆಯ ಬಗ್ಗೆ ಸಂಬಂಧಪಟ್ಟವರಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ;

ಶ್ರೀ ವೀರಕುಮಾರ ಅ.ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಸಾಮರ್ಥ್ಯದ ವಿವರಗಳು ಕೆಳಕಂಡಂತಿದೆ.

1) ದೇವನೂರು	1★6.3 ಎಂ.ವಿ.ಎ. 66:11 ಕೆ.ವಿ.
2) ಸಂತೇಮರಳ್ಳಿ	2★6.3 ಎಂ.ವಿ.ಎ 66:11 ಕೆ.ವಿ.
3) ಚಂದಕವಾಡಿ	1★5 ಎಂ.ವಿ.ಎ. 33:11 ಕೆ.ವಿ.

ಆ) ಹಾಲಿ ಇರುವ ವಿದ್ಯುತ್ ಬೇಡಿಕೆಗಳ ವಿವರಗಳು

1) ದೇವನೂರು	:	10 ಮೆಗಾ ವ್ಯಾಟ್
2) ಸಂತೇಮರಳ್ಳಿ	:	7.8 --''--
3) ಚಂದಕವಾಡಿ	:	8 --''--

ಇ) ಸಂತೇಮರಳ್ಳಿಯ ಉಪ ಕೇಂದ್ರದಲ್ಲಿ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಆದರೆ ದೇವನೂರು ಮತ್ತು ಚಂದಕವಾಡಿಗಳಲ್ಲಿರುವ ವಿದ್ಯುತ್ ಉಪಕೇಂದ್ರಗಳಲ್ಲಿ ಪ್ರಸ್ತುತ ಇದು ಸಾಧ್ಯವಾಗುತ್ತಿಲ್ಲ.

ಈ) (ಈ) ಮತ್ತು (ಉ)

ದೇವನೂರು 66:11 ಕೆ.ವಿ. ಉಪಕೇಂದ್ರದಲ್ಲಿ ಇನ್ನೊಂದು 6.3 ಎಂ.ವಿ.ಎ.ಪವರ್ ಟ್ರಾನ್ಸ್‌ಫಾರ್ಮರ್‌ನ್ನು ಹೆಚ್ಚುರಿಯಾಗಿ ಅಳವಡಿಸಲು ಉದ್ದೇಶಿಸಿದ್ದು, ಈ ಬಗ್ಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ.

ಚಂದಕವಾಡಿ 33:11 ಕೆ.ವಿ. ಉಪ ಕೇಂದ್ರದಲ್ಲಿ ಇನ್ನೊಂದು 5 ಎಂ.ವಿ.ಎ.ಪವರ್ ಟ್ರಾನ್ಸ್‌ಫಾರ್ಮರ್‌ನ್ನು ಹೆಚ್ಚುವರಿಯಾಗಿ ಅಳವಡಿಸಲು ಕಾಮಗಾರಿಯು ಪ್ರಗತಿಯಲ್ಲಿದ್ದು ಏಪ್ರಿಲ್-2001ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಗುರಿಯನ್ನು ಹೊಂದಿದೆ.